ಗೋಪುರದ ಮೇಲಿನ ಕಳಸ ಸ್ಥಾಪನೆಯ ಅಷ್ಟೂ ಖರ್ಚಿಗೆ ಬಾಲ್ರಾಜನನ್ನು ಒಪ್ಪಿಸಿ, ಅಗಾ ಇಗಾ ಅನ್ನುವುದರೊಳಗೆ ಅವುಗಳ ಕೆಲಸವನ್ನೂ ಶುರುಮಾಡಿಸಿಬಿಟ್ಟಿದ್ದರು. ಆಗ ಹೆಚ್ಚೂ ಕಡಿಮೆ ಹತ್ತು ಲಕ್ಷದಷ್ಟು ಕಾಸು ಬಾಲ್ರಾಜನನ್ನು ಕೈಬಿಟ್ಟಿತ್ತು. ಆದರೆ, ಇದರಿಂದ ಊರಿನಲ್ಲಿ ಬಾಲ್ರಾಜನ ವರ್ಚಸ್ಸು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚಾಗಿತ್ತು. ಹಂಗಾಗಿ, ಬಾಲ್ರಾಜ ಊರಿಗೆ ಬಂದರೆ ಸಾಕು, ಅವನ ಹಿಂದೆ ಒಂದು ದೊಡ್ಡ ಹಿಂಡೇ ಇರುತ್ತಿತ್ತು. ಆದರೆ, ಇದೆಲ್ಲಾ ಬಡತನದ ಬಿಸಿಯನ್ನು ಕಂಡಿದ್ದ ಸಂಪಕ್ಕಜ್ಜಿಗೆ ಅತಿ ಅನಿಸಿ, 'ಇದೇನ್ಲಾ ಮಗಾ ಕಾಸೂಂದ್ರೆ ನಿಂಗೆ ಕಳ್ಳೇಪುರಿ ಆಗೋಯ್ತಾ?' ಅಂತ ಅನ್ನುತ್ತಿದ್ದಳು. ಬಾಲ್ರಾಜ ಸುಮ್ಮನೇ ನಗುತ್ತಿದ್ದ. ತನ್ನ ಫ್ಯಾಕ್ಟರಿಯ ಒಂದು ದಿನದ ಆದಾಯವನ್ನು ಇಲ್ಲಿ ಕೊಟ್ಟಿದ್ದೇನಷ್ಟೇ, ಅಷ್ಟಕ್ಕೂ ಹುಟ್ಟಿದ ಊರಿಗೆ ಇಷ್ಟೂ ಮಾಡದಿದ್ದರೆ ಹೆಂಗೆ ಅಂತ ತನಗೆ ತಾನೇ ಅಂದುಕೊಂಡಿದ್ದ.

## 3

ಗುಡಿಗೆ ಹೋದವರು ಹಂಗೇ ಒಂದು ಸಾರ್ತಿ ಕೋಡ್ಗಲ್ಲಿಗೂ ಹೋಗಿ ಬರತೊಡಗಿದ್ದರಿಂದ ಅಲ್ಲಿಗೆ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚತೊಡಗಿತ್ತು. ಸುತ್ತಲ ಹಳ್ಳಿಗಳವರಲ್ಲದೆ ದೂರದಿಂದಲೂ ಕೆಲವರು ಬಂದೋಗತೊಡಗಿದ್ದರು. ಸಂಪಕ್ಕಜ್ಜಿಯೂ ಆಜಮ್ಮಜ್ಜಿಯೊಂದಿಗೆ ಆಗಾಗ ಕೋಡ್ಗಲ್ಲಿಗೆ ಹೋಗಿ ಬರುತ್ತಿದ್ದಳು. ಅಲ್ಲಿಗೆ ಹೋದಾಗಲೆಲ್ಲಾ ಮಗನ ಬಗೆಗಿನ ಅಭಿಮಾನ ಉಕ್ಕುತ್ತಿತ್ತು. ಯಾವಾಗ ಆ ಹಳ್ಳಿ ಹಾಗೂ ಸುತ್ತ ಮುತಲ ಹಳ್ಳಿಗಳ ಜನರು ಹಬ್ಬ ಜಾತ್ರೆ ಮುಂತಾದ ಹೊತ್ತಲ್ಲಿ ಅಲ್ಲಿದ್ದ ಗುಡಿಯ ದೇವರನ್ನು ಪೂಜಿಸಿದಂತೆ ಅದನ್ನೂ ಪೂಜಿಸುತ್ತಾ, ಅದಕ್ಕೆ ಹರಕೆ ಹೊತ್ತಂತೆ ಅದಕ್ಕೂ ಹೊರುತ್ತಾ ಅದಕ್ಕೆ ಎಡೆ ಮಾಡಿದಂತೆ ಈ ಕೋಡ್ಗಲ್ಲಿಗೂ ಮಾಡತೊಡಗಿದರೋ ಮೊದಲೇ 'ಶಿಲುಬೆ ಮಲೆ' ಅನ್ನುವ ಬೋರ್ಡನ್ನು ನೋಡಿ ಕುದ್ದು ಹೋಗಿದ್ದವರೊಳಗೆ ಈ ನಡೆ ಮಹಾನ್ ಅಪಾಯದ ಸೂಚನೆಯಂತೆ ಕಂಡಿತ್ತು. ಬರಬರುತ್ತಾ ಕೋಡ್ಗಲ್ಲು ಬಹುತೇಕ ಹಳ್ಳಿಯ ಮನಸ್ಸುಗಳಿಗೆ 'ಶಿಲುಬೆ ದೇವ್ರು, ಸಿಲುಬಪ್ಪ' ಆಗತೊಡಗಿದನೋ ಅವರಿಗಿದು ತಮ್ಮ ಧರ್ಮವನ್ನು ಹಳ್ಳ ಹಿಡಿಸುತ್ತಿರುವ ಹುನ್ನಾರದಂತೆ ಭಾಸವಾಗಿತ್ತು. ಇದನ್ನಿಲ್ಲಿಗೇ ತುಂಡಾಕದಿದ್ದರೆ ಮುಂದೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ತಮಗೆ ಮಾರ್ಗದರ್ಶನ ನೀಡುತ್ತಿದ್ದವರಿಗೆ ಇದರ ವರದಿ ಒಪ್ಪಿಸಿದ್ದರು. ಅವರು ತಮ್ಮ ಗುಪ್ತ ಧರ್ಮ ಸಂರಕ್ಷಕಾ ಸಭೆಯಲ್ಲಿ ತೀರ್ಮಾನಿಸಿ ಅದನ್ನು ತಮ್ಮ ಮೇಲಿನ ತಲೆಗಳಿಗೆ ದಾಟಿಸಿದ್ದರು. ಅದಲ್ಲಿ ಮರು ಚರ್ಚೆಗೊಳಗಾಗಿ ಕೋಡ್ಗಲ್ಲಿಗೆ 'ಶಿಲುಬೆ ಮಲೆ' ಅಂತ ಹೆಸರಿಡುವ ಹಿಂದಿನ ಮರ್ಮವೇ ಮತಾಂತರದ ಉದ್ದೇಶವೆಂದೂ ಇದರ ಹಿನ್ನೆಲೆಯಲ್ಲಿ ದೊಡ್ಡದೊಂದು ತಂಡವೇ ಕೆಲಸ ಮಾಡುತ್ತಿದೆಯೆಂದೂ ಅದರ ಮುಖ್ಯಸ್ಥನೇ ಬಾಲ್ರಾಜ ಉರುಫ್ ಜೋಸೆಫ್ ಎಂಬ ತೀರ್ಮಾನಕ್ಕೆ ಬಂದಿತ್ತು. ಅಂತೆಯೇ ಇದಕ್ಕೆಲ್ಲಾ ಹಣ ಹರಿದು ಬರುತ್ತಿರುವುದು ಮೇಲ್ನೋಟಕ್ಕೆ ಬಾಲ್ರಾಜನ ಟೆಕ್ಸ್‌ಟೈಲ್ ಫ್ಯಾಕ್ಟರಿಯ ಕೋಟ್ಯಂತರ ರೂಪಾಯಿಯ ವಹಿವಾಟನಿಂದ ಎಂಬಂತೆ ಕಂಡರೂ ಇದರ ಹಿಂದೆ ಅಂತರರಾಷ್ಟ್ರೀಯ ನಂಟೊಂದು ಕೆಲಸ ಮಾಡುತ್ತಿದೆ ಎಂಬ ವದಂತಿಯನ್ನೂ ಹರಿಬಿಟ್ಟಿತ್ತು. ಹಂಗಾಗಿ ಇದನ್ನು ತಡೆಗಟ್ಟಲು ಸದರಿ ಹಳ್ಳಿಯಲ್ಲಿ ಮಾತ್ರವಲ್ಲದೆ ಸುತ್ತಲ ಹಳ್ಳಿಗಳಲ್ಲೂ ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕೆಂದೂ ಅಲ್ಲಿನ ದೈನಂದಿನ ಸಂಗತಿಗಳ ಮೇಲೆ ನಿಗಾ ಮಡಗಬೇಕೆಂದೂ ಹಾಗೂ ಜನರ ಮನಸ್ಸಿನಲ್ಲಿ ಇದೊಂದು ಅಪ್ಪಟ ಮತಾಂತರದ ಕೆಲಸ ಎಂಬ ಆಲೋಚನೆ ಬಲಗೊಳ್ಳುವಂತೆ ನೋಡಿಕೊಳ್ಳಬೇಕೆಂದೂ ಅದಕ್ಕಾಗಿ ಕೆಲವು ಸಲಹೆ ಸೂಚನೆಗಳನ್ನು ಅವರಿಗೆ ರವಾನಿಸಿತ್ತು.

ಅಂಥ ಸೂಚನೆಗಳು ಹಳ್ಳಿಯಲ್ಲಿ ತುಂಬಾ ಗುಟ್ಟಿನ ಯೋಜನೆಗಳಾಗಿ ಮಾರ್ಪಟ್ಟು